ಓ.ಎಸ್. ನಂ. 18/2016

ಪಿ.ಡಬ್ಲ್ಯು: 02 (ಹುಲುಗಪ್ಪ)

ದಿನಾಂಕ: 21.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ ಪಿ ಡಿ ಕೆ ವಕೀಲರಿಂದ.

ನಾನು ಬಿ.ಡಿ.ಗುಡ್ಡ ಗ್ರಾಮಕ್ಕೆ ಸೇರಿದವನು. ವಾದಿಯ ಸ್ವಂತ ಊರು ಮಲ್ಲನಾಯಕನಹಳ್ಳಿ. ದಾವಾ ಸ್ವತ್ತು ಹ್ಯಾಳ್ಯಾ ಕಂದಾಯ ಗ್ರಾಮಕ್ಕೆ ಸೇರಿರುತ್ತದೆ. ವಾದಿ ನನ್ನ ಚಿಕ್ಕಪ್ಪ. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಚಿಕ್ಕಪ್ಪನಿಗೆ ಆರೋಗ್ಯ ಸರಿ ಇರದ ಕಾರಣ ನನಗೆ ಜಿಪಿಎ ನೀಡಿರುತ್ತಾರೆ. ವಾದಿ ಚೆನ್ನಾಗಿದ್ದರು ಸಹ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಬರುತ್ತದೆ ಎಂದು ನನಗೆ ಜಿಪಿಎ ನೀಡಿರುತ್ತಾರೆ ಎಂದರೆ ಸುಳ್ಳು. ನಾನು ರಿಯಲ್‌ಎಸ್ಟೇಟ್ ಉದ್ಯಮಿಯಾಗಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಅನಾರೋಗ್ಯ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿ ಅವರ ಆಸ್ತಿ ಎಂದು ಹೇಳಿ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿ ಯಾವ ದಾಖಲಾತಿಗಳ ಆಧಾರದ ಮೇರೆಗೆ ದಾವೆ ಸಲ್ಲಿಸಿದ್ದಾರೆ ಎಂಬ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.